ದಿನವನ್ನು ವ್ಯರ್ಥವಾಗಿ ಕಳೆಯಬಾರದು.'

ಏನೊಂದು ನಿರ್ಣಯ ಮಾಡುವ ಮೊದಲೇ ಮಳೆ ಶುರುವಾಗಿಬಿಟ್ಟಿತು. ಸ್ವಲ್ಪದೂರ ಓಡುತ್ತ ಹೋಗಿ ಟ್ಯಾಕ್ಸಿಯನ್ನು ಕೂಗಿ ಕರೆದು ಬೇಗ ಒಳಗೆ ನುಸುಳಿಕೊಂಡಳು. ಟ್ಯಾಕ್ಸಿ ಮಾಡಿಯಾಯಿತು ಎಂದಮೇಲೆ ಎಲ್ಲಿಗಾದರೂ ಒಂದು ಕಡೆ ಹೋಗಲು ಹೇಳಲೇಬೇಕಾಯಿತಲ್ಲ... 'ಜಹಾಂಗೀರ ಆರ್ಟ್ ಗ್ಯಾಲರಿ...' ಮೊಟ್ಟಮೊದಲು ಬಾಯಿಂದ ಹೊರಬಿತ್ತು, ಹೇಳಿಬಿಟ್ಟಳು.

ಗ್ಯಾಲರಿಯಲ್ಲಿ ಯಾವುದೊ ಒಬ್ಬ ಆಧುನಿಕ ಚಿತ್ರಕಾರನ ಪ್ರದರ್ಶನ ನಡೆಯುತ್ತಿತ್ತು. ಹೆಚ್ಚಿಗೇನೂ ಅರ್ಥವಾಗಲಿಲ್ಲವಾದರೂ ಸಂತೋಷ ಖಂಡಿತ ಆಯಿತು. ಆಕೆ ಚಿತ್ರವೊಂದರ ಬಳಿ ಸಾಕಷ್ಟು ಹೊತ್ತು ನಿಂತಳು. ನೋಡಿದಳು; ಇಡೀ ಕ್ಯಾನವಾಸಿನ ಮೇಲೆ ಬಣ್ಣ ಬಣ್ಣದ ರೇಖೆಗಳು ಅತ್ತ ಇತ್ತ ಜೋರಾಗಿ ಚಲಿಸುತ್ತಿವೆ. ಅವಳು ಯೋಚಿಸಿದಳು ಅರೆ! ಇದು ಖಂಡಿತ ನನ್ನ ಕುರ್ತಾದ ಥರಾನೇ ಇದೆ.

ಆಕೆ ಅದೆಷ್ಟು ದೊಡ್ಡದಾಗಿ ನಕ್ಕಳೆಂದರೆ ಪಕ್ಕದಲ್ಲಿಯೇ ಇದ್ದ ಗಡ್ಡದವನೊಬ್ಬ ಆಕೆಯನ್ನು ದುರುಗುಟ್ಟಿ ನೋಡ ಹತ್ತಿದ. ಒಂದುವೇಳೆ ಇವನೇ ಚಿತ್ರಕಾರನಾಗಿರಬಹುದೆ? ಬಡಪಾಯಿ! ಚಿತ್ರ ಖಂಡಿತ ತುಂಬ ಕಷ್ಟಕರವಾದದ್ದಿರಬೇಕು...

ಆಕೆ ಗಂಭೀರವಾಗಿ ಆ ಗಡ್ಡಧಾರಿಯ ಬಳಿಗೆ ಹೋದಳು ಮತ್ತು ತುಂಬ ವಿನಮ್ರತೆಯಿಂದ 'ಸಾರಿ' ಎಂದು ನುಡಿದು ಹೊರಗೆ ಬಂದಳು. ಹೊರಗೆ ಬಂದು ಯೋಚಿಸಿದಳು: 'ಬಹುಶಃ ಆತ ಕಲಾವಿದ ಆಗಿರಲಾರ ಉದ್ಯೋಗಪತಿಯಾಗಿರಬಹುದು...'

ಎರಡು ಥರದ ಜನ ಗಡ್ಡಬಿಡುವ ಸಾಹಸ ಮಾಡುತ್ತಾರೆ ಒಬ್ಬ ಕಲಾವಿದ ಇನ್ನೊಬ್ಬ ಸಾಮಂತ. ಸಾಮಂತರೇನೋ ಈಗಿಲ್ಲ. ಆದರೆ ಅವರ ಸ್ಥಾನವನ್ನು ಉದ್ಯೋಗಪತಿಗಳು ಆಕ್ರಮಿಸಿಕೊಂಡಿದ್ದಾರೆ. ಅಂದಮೇಲೆ ಅವಳೇಕೆ 'ಸಾರಿ' ಕೇಳಿದಳು? ಎಂದು ಇಡೀ ದಿನ ಆತ ಇದನ್ನೇ ಯೋಚಿಸುತ್ತಿರಬಹುದು. ಅದರಲ್ಲಿಯೂ ಲಾಭದ ಅವಕಾಶವನ್ನೇ ಹುಡುಕುತ್ತಿರಬಹುದು! ಅವಳು ಇನ್ನೂ ಜೋರಾಗಿ ನಕ್ಕಳು...

ಮತ್ತೆ ಹೊರಗೆ ನೋಡಿದಳು; ಮಳೆ ನಿಂತಿದೆ, ಆದರೆ, ಆಕಾಶ ಮಾತ್ರ ಇನ್ನೂ ಕೋಪದಲ್ಲಿಯೇ ಇರುವಂತಿದೆ. ಪೂರ್ತಿಯಾಗಿ ಮಳೆ ಸುರಿದು ಹೋಗಿಲ್ಲ... ಎಂದು ಯೋಚಿಸುತ್ತಲೇ ಮತ್ತೆ ರಸ್ತೆಗೆ ಇಳಿದಳು. ರಸ್ತೆಯ ಅಂಚಿನಲ್ಲಿರುವ ರೆಸ್ಟೋರೆಂಟ್ ಕಡೆ ದೃಷ್ಟಿ ಹೋಗುತ್ತಲೆ ನೆನಪಾಯಿತು: ತುಂಬಾ ಹಸಿವೆಯಾಗಿದೆ ಎಂದು. ಒಳಗೆ ಹೋಗಿ ತಕ್ಷಣ ಆರ್ಡರ್ ಮಾಡಿದಳು: 'ಒಂದು ಬಿಸಿಬಿಸಿ ಆಲೂಬೋಂಡಾ ಮತ್ತು ಒಂದು ಐಸ್‌ಕ್ರೀಮ್... ಒಟ್ಟಿಗೇ...'

'ಒಂದೇ ಬಾರಿ?!' ಮಾಣಿ ಅಚ್ಚರಿ ವ್ಯಕ್ತಪಡಿಸಿದ.

'ಹೌದು... ಏನಾದರೂ ತೊಂದರೆ ಇದೆಯೆ?'

'ಮೇಡಂ, ಇಲ್ಲ, ಇಲ್ಲ... ತಂದೆ...'

ಆಕೆಗೆ ಥಂಡಾ ಮತ್ತು ಗರಮ್ ಒಂದೇ ಬಾರಿ ತಿನ್ನುವುದೆಂದರೆ ಸುಸ್ವಾದು ಎನಿಸುತ್ತೆ... ಹೇಳುತ್ತಾರೆ ಹಲ್ಲು ಕೆಟ್ಟುಹೋಗುತ್ತೆ ಅಂತ. ಇಂದು ಎಷ್ಟು ಚಟಾಪಟಾ ಕೆಲಸ ಆಗಿಬಿಡ್ತು! ರಾಜನ್ ಇದ್ದಿದ್ದರೆ ಏಸಿ ರೂಮಿನಲ್ಲೇ ಕೂತುಕೊಂಡು, ಐಟಂ ಮೆನು ನೋಡಿ, ಅಳೆದು ಸುರಿದು ವಿಚಾರಮಾಡಿ ಆರ್ಡರ್ ಮಾಡುತ್ತಿದ್ದ. ತಿಂಡಿ ತಿಂದು ಹೊರಗೆ ಬರುತ್ತಲೇ ಯೋಚಿಸಿದಳು: ಇಲ್ಲೇ ಹತ್ತಿರದಲ್ಲೆಲ್ಲಾದರೂ ಸಿನಿಮಾ ಮಂದಿರ ಇದ್ದರೆ ಪಿಕ್ಚರ್ ನೋಡಿಬಿಡೋಣ. ಭಾಗ್ಯವಶಾತ್ ಹಳೆಯ ಒಂದು ವಿನೋದಪೂರ್ಣ ಇಂಗ್ಲಿಷ್ ಫಿಲ್ಮ್ ಹತ್ತಿರುವುದು ಸಿಕ್ಕಿತು.